ಸ್ಟ್ 1885ನೇ ಇಸವಿ ಮೇ ತಿಂಗಳ ಕಾಲಸ್ಥಿತಿ ರಿಪ್ರೋರ್ಟು.

ಕಡೂರು ಡಿಸ್ಟ್ರಿಕ್ಟು.

ಮಳೆ.—ಈ ಮಾಹೆಯೊಳಗೆ ಇದರಡೀಕಂಡಂತೆ ಮಳೆ ಅಳಿಯಲ್ಪಟಿದೆ:—

ತಾಲ್ಲೂಕುಗಳು.	ಇಂ.	ಸೆಂ.	ತಾಲ್ಲೂಕುಗಳು	ಇಂ.	ಸೆಂ.
ತರೀಕೆರೆ ..	4	30	ಎಡೆಹಳ್ಳಿ ..	10	15
ಕೊಪ್ಪ ..	19	59	ಹಾಸನ ..	4	14
ಚಿಕ್ಕಮಗಳೂರು ..	4	18	ಮಂಜೀರಾಬಾದ್ ..	16	54
ಕಡೂರು ..	0	14	ಬೇಲೂರು ..	2	64
ಮೂಡಗೆರೆ ..	20	56	ಅರಕೇರೆ ..	0	72½

ಪೇರಾವಾವ ಬೀಜಗಳು—ತರೀಕೆರೆ, ಚಿಕ್ಕಮಗಳೂರು, ಹಾಸನ ಮತ್ತು ಮಂಜೀರಾಬಾದ್ ತಾಲ್ಲೂಕುಗಳಲ್ಲಿ ಭತ್ತಾ ಮತ್ತು ರಾಗಿ, ಕೊಪ್ಪಾ ಮತ್ತು ಮೂಡಗೆರೆ ತಾಲ್ಲೂಕುಗಳಲ್ಲಿ ಭತ್ತ ಮಾತ್ರ, ಕಡೂರು ಮತ್ತು ಬೇಲೂರು ತಾಲ್ಲೂಕುಗಳಲ್ಲಿ ರಾಗಿ, ಅರಕೇರೆ ತಾಲ್ಲೂಕಿನಲ್ಲಿ ಉದ್ದುವರ್ಗೈರೆ.

ಕಟಾವಿದ ಫಸಲ್‌ಗಳು—ಈ ಮಾಹೆಯೊಳಗೆ ಫಸಲ್‌ಗಳೇನೂ ಕಟಾವಾಗಲಿಲ್ಲವು.

ಫಸಲ್ ಸ್ಥಿತಿ—ಮಲ್ನಾಡು ತಾಲ್ಲೂಕುಗಳಲ್ಲಿ ಚನ್ನಾಗಿದೆ, ಮೈದಾನ ಪ್ರದೇಶಗಳಲ್ಲಿ ಕೆಟ್ಟಹೋಗಿದೆ.

ಕಾಲಸ್ಥಿತಿ—ಸಾಧಾರಣವಾಗಿ ಚನ್ನಾಗಿದೆ.

ಜನಾರೋಗ್ಯ—ಸಾಧಾರಣವಾಗಿ ಚನ್ನಾಗಿಯಿದೆ. ಆದರೆ, ಕೊಪ್ಪಾ, ಚಿಕ್ಕಮಗಳೂರು ಮತ್ತು ಹಾಸನ ತಾಲ್ಲೂಕುಗಳಲ್ಲಿ ಜ್ವರ ಇನ್ನು ಸ್ವಲ್ಪ ಮಟ್ಟಿಗೆ ಇದೆ.

ಕಾಲ್ನಡೆ—ಈ ಮಾಹೆಯೊಳಗೆ 1,235 ಕಾಲ್ನಡೆಗಳು ಹೋಗಿರುತ್ತೆ. ಕಳೆದ ತಿಂಗಳಲ್ಲಿ 952 ಹೋಗಿವೆ. ಕಡೂರು ಚಿಕ್ಕಮಗಳೂರು, ಹಾಸನ ತಾಲ್ಲೂಕುಗಳಲ್ಲಿ ಕಾಲುಬಾಯಿ ಜ್ವರ ವ್ಯಾಪಿಸಿದೆ. ಪರಂತು ಮೂಡಗೆರೆ ತಾಲ್ಲೂಕಿನಲ್ಲಿ ಸ್ವಲ್ಪ ಕಮ್ಮಿಯಾಗಿದೆ, ಮೈದಾನ ತಾಲ್ಲೂಕುಗಳಲ್ಲಿ ಕೆಲವು ಪ್ರದೇಶಗಳು ಹೊರಾಯಿ ಅನ್ಯತ್ರ ಕುಡಿಯುವ ನೀರು ಮೇವೂ ಚನ್ನಾಗಿವೆ.

ಜಮ್ಮಾ—5,124—5—8 ರೂಪಾಯಿ ಕಂದಾಯ ಬಾಳುವ ಜಮ್ಮಾ ಸಾಗುವಳೀ ಬಯ್ಕೆ ತೆಗದುಕೊಳ್ಳಲ್ಪಟ್ಟಿದೆ. ಈ ಮಾಹೆ ಯೊಳಗೆ ರಾಜೀನಾಮೆ ಏನು ಇಲ್ಲವು.

ದಾರಣೆ—ವ್ಯತ್ಯಾಸವೇನು ಇಲ್ಲವು.

ಕೆ. ನಾಗೇಶರಾವ್,
ಫಾರ್ ಡೆಪ್ಯೂಟಿ ಕಮ್ಮಿಷನರ್.

ಗವರ್ನ್‌ಮೆಂಟ್ ಗಾರ್ಡ್ನ್ಸ್.

ನೋಟೀಸ್.

ತಾರೀಖು 13ನೇ ಜುಲೈ 1885.

ಇದರಿಂದ ಪ್ರಕಟಿಪಡಿಸುವದೇನಂದರೆ—ಸ್ಟ್ 1885ನೇ ಇಸವಿ ಆಗಸ್ಟ್ 14ನೇ ಮತ್ತುಂ ಶುಕ್ರವಾರದಲ್ಲಿ ಎರಡನೇ ಸಲದ ಹಾರ್ಟಿ ಕಲ್‌ಚ್ಯರಲ್ ಷೋ ಯೂನೆ ಫಲಪುಷ್ಪಗಳನ್ನು ತೋರಿಸುವ ವಿನೋದವು ನಡಿಯುವದು.

ಇನಾಂ ಪಟ್ಟಿಗಳು ಸ್ವಲ್ಪ ದಿವಸಗಳೊಳಗಾಗಿ ಜನಗಳಿಗೆ ಪೊವಗಿಸಲ್ಪಡುವವು. ವಿಶೇಷ ವರ್ತಮಾನ ತಿಳಿಯಬೇಕಾಗಿದ್ದರೆ, ಇವರ ರಡಿ ರುಜು ಮಾಡಿರುವರಲ್ಲಿ ಕೇಳತಕ್ಕದ್ದು.

ಜೆ. ಕ್ಯಾಮಿರ್ಲ್,
ಸೂಪರ್‌ಟಿಂಡೆಂಟ್, ಗವ್ಹ ಗಾರ್ಡ್ನ್ಸ್.

Mysore Government Press, Bangalore.—1885.